

# ಭಾವವಿದೆ ಪದದಲ್ಲಿ

ಅವಿತು ಕುಳಿತ ರಂಗಿನ ಕಾಮನಬಿಲ್ಲಿದೆ ಕಣ್ಣಲ್ಲಿ
ಮರೆಮಾಚದೆ ಎಲ್ಲವನ್ನೂ ತೋರಬೇಕೇನು
ಮೋಹದ ಮೋಹಕತೆಯ ಬಚ್ಚಿಟ್ಟಿರುವೆ ಎದೆಯಲ್ಲಿ
ನಿರ್ವಂಚನೆಯಿಂದ ಅದನ್ನು ಹಂಚುವೆನು ನಾನು

ಆಸೆಗಳ ಮೊಳಕೆಗೆ ಮತ್ತು ಬರಿಸಿದೆ ನೀನು
ಬಿರಿದು ಹರಡಲು ಕೊನೆಗೆ ಕಾಯಬೇಕು ತಾನೆ
ಸತಾಯಿಸುವ ಮುನ್ನ ಯೋಚಿಸಲಿ ಭಾನು
ಮಿಂಚು ಹರಡಿದ ಬಯಲಲಿ ಬಿಳಿಮುತ್ತು ನಾನೆ

ಹೇಗೆ ಪಿಸುಗುಡಲಿ ಎಳೆ ಹೃದಯದ ಕೊಸರು
ನೋವ ಜೋಕಾಲಿಯ ಕೊಂಡಿ ಬಲವಾಗಿರಲು ಹೇಳು
ಸವರಿ ಸುತ್ತಾಡಿ ಬಳಿದು ಬಳಲಿಸಿ ಹೊಮ್ಮಿಸುವ ಭಾವ
ತೀರದ ಮರಳು ಶಿಲ್ಪವಾಗುವ ಆಕೃತಿಯ ಸಾಲು



ಬರಿದಲ್ಲ ಈ ಮನಸು ಹೊಂಗೆ ಹೂಗೊಂಚಲು
ಶೃಂಗಾರದೆಡೆಗೆ ಹೊರಳಿ ತುಯ್ಯುವುದು ಮತ್ತೆಮತ್ತೆ
ದಿಕ್ಕೆಟ್ಟ ವಿರಹಕ್ಕೆ ದಾರಿ ತೋರುವ ಪಲ್ಲಟದ ವಾಂಛೆ
ನಕ್ಷತ್ರದ ತುದಿಗೆ ಸಿಕ್ಕಿಸಿ ಮಾದಕತೆಯ ಇಳಿಬಿಟ್ಟಂತೆ

ಒಡ್ಡಿದಾ ಕಿರುಬೆರಳು ಹಿಡಿದು ನಡೆಯಲಿ ಮುಂದೆ
ಈ ದಾರಿ ಯಾವತ್ತೂ ಕೊರಗಿಲ್ಲ ಸವೆದಿಲ್ಲ ನಮಗೆ
ಏನು ಹೇಳಿದರೂ ಮಾತು ಮುಗಿಯದ ಸಮಯ
ಅತ್ತು ನಗಲಿ ಸಂಜೆ ಮುಂಜಾವು ಬಾಂಧವ್ಯವಿದೆ ಕೊನೆಗೆ

• ಮಮತಾ ಅರಸೀಕೆರೆ
ಕಲೆ: ವಾಗೀಶ ಹೆಗಡೆ

